**185/24-K**

**Question Booklet Alpha Code**

| **A** |
|---|

**A**

| **Question Booklet Sl. No.** |
|---|
| |

| **Total Number of Questions : 100** | **Time : 75 Minutes** |
|---|---|
| | **Maximum Marks : 100** |

## INSTRUCTIONS TO CANDIDATES

1. The Question Paper will be given in the form of a Question Booklet. There will be four versions of Question Booklets with Question Booklet Alpha Code viz. **A, B, C** & **D**.
2. The Question Booklet Alpha Code will be printed on the top left margin of the facing sheet of the Question Booklet.
3. The Question Booklet Alpha Code allotted to you will be noted in your seating position in the Examination Hall.
4. If you get a Question Booklet where the alpha code does not match to the allotted alpha code in the seating position, please draw the attention of the Invigilator IMMEDIATELY.
5. The Question Booklet Serial Number is printed on the top right margin of the facing sheet. If your Question Booklet is un-numbered, please get it replaced by new Question Booklet with same alpha code.
6. The Question Booklet will be sealed at the middle of the right margin. Candidate should not open the Question Booklet, until the indication is given to start answering.
7. Immediately after the commencement of the examination, the candidate should check that the Question Booklet supplied to him/her contains all the 100 questions in serial order. The Question Booklet does not have unprinted or torn or missing pages and if so he/she should bring it to the notice of the Invigilator and get it replaced by a complete booklet with same alpha code. This is most important.
8. A blank sheet of paper is attached to the Question Booklet. This may be used for rough work.
9. **Please read carefully all the instructions on the reverse of the Answer Sheet before marking your answers.**
10. Each question is provided with four choices **(A), (B), (C)** and **(D)** having one correct answer. Choose the correct answer and darken the bubble corresponding to the question number using Blue or Black Ball Point Pen in the OMR Answer Sheet.
11. **Each correct answer carries 1 mark and for each wrong answer 1/3 mark will be deducted. No negative mark for unattended questions.**
12. No candidate will be allowed to leave the examination hall till the end of the session and without handing over his/her Answer Sheet to the Invigilator. Candidates should ensure that the Invigilator has verified all the entries in the Register Number Coding Sheet and that the Invigilator has affixed his/her signature in the space provided.
13. Strict compliance of instructions is essential. Any malpractice or attempt to commit any kind of malpractice in the Examination will result in the disqualification of the candidate.

A

1. ವೈಕುಂಠ ಸ್ವಾಮಿಗಳ ಬಗೆಗಿನ ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದವುಗಳನ್ನು ಕಂಡುಹಿಡಿಯಿರಿ.
   i. ಅವರು 1908ರಲ್ಲಿ ತಿರುವನಂತಪುರಂ ಜಿಲ್ಲೆಯ ಕೊಲ್ಲೂರು ಗ್ರಾಮದಲ್ಲಿ ಜನಿಸಿದರು.
   ii. ಅವರ ನಂಬಿಕೆಯ ಸಂಹಿತೆಯನ್ನು ಅಯ್ಯಾವಾಳಿ ಎಂದು ಕರೆಯಲಾಗುತ್ತದೆ.
   iii. ಅವರು ಅರುಳ್‌ನೂಲ್‌ಅನ್ನು ಬರೆದಿದ್ದಾರೆ.
   iv. ಕನ್ನಡಿಯನ್ನು ಪವಿತ್ರಗೊಳಿಸಲಾಯಿತು.
   A) i ಮತ್ತು iv ಮಾತ್ರ
   B) ii, iii, iv ಮಾತ್ರ
   C) ii ಮತ್ತು iii ಮಾತ್ರ
   D) ಎಲ್ಲವೂ ಸರಿಯಾಗಿದೆ

2. ವಯನಾಡಿನಲ್ಲಿ ಬ್ರಿಟೀಷರ ವಿರುದ್ಧದ ಕುರಿಚ್ಯ ದಂಗೆಯ ಬಗೆಗಿನ ಈ ಕೆಳಗಿನವುಗಳಲ್ಲಿ ಯಾವುದು ಸುಳ್ಳು ಹೇಳಿಕೆಯಾಗಿದೆ ?
   i. ದಂಗೆಯು 1812 ರಲ್ಲಿ ನಡೆಯಿತು.
   ii. ದಂಗೆಯನ್ನು ಹತ್ತಿಕ್ಕಲು ಬ್ರಿಟೀಷರು ರಾಮನಂಬಿಯನ್ನು ನೇಮಿಸಿದರು.
   iii. ದಂಗೆಯ ಪ್ರಮುಖ ನಾಯಕ ಪಾಲಿಯತಚ್ಚನ್ ಬ್ರಿಟೀಷರಿಂದ ಕೊಲೆಗೀಡಾದರು.
   iv. ಗಲಭೆಕೋರರು ದುಂಡುಟೋಪಿಗಳನ್ನು ದೇಶದಿಂದ ಹೊರಹಾಕಲು ಘೋಷಣೆಗಳನ್ನು ಕೂಗಿದರು.
   A) i ಮತ್ತು iv ಮಾತ್ರ
   B) ii ಮತ್ತು iv ಮಾತ್ರ
   C) ii ಮತ್ತು iii ಮಾತ್ರ
   D) iii ಮತ್ತು iv ಮಾತ್ರ

3. 2024 ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಗೆದ್ದ ಹಾನ್‌ಕಾಂಗ್ ಬಗ್ಗೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?
   i. ಸಾಹಿತ್ಯದಲ್ಲಿ ನೊಬೆಲ್ ಪ್ರಶಸ್ತಿಯನ್ನು ಗೆದ್ದ ದಕ್ಷಿಣ ಕೊರಿಯಾದ ಮೊದಲ ಮಹಿಳೆ.
   ii. ಸಾಹಿತ್ಯದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಏಷ್ಯಾದ ಮೊದಲ ಮಹಿಳೆ.
   iii. ಅವರು ತಮ್ಮ 'ದಿ ವೆಜಿಟೇರಿಯನ್' ಕಾದಂಬರಿಗಾಗಿ ಮ್ಯಾನ್ ಬೂಕರ್ ಪ್ರಶಸ್ತಿಯನ್ನು ಪಡೆದಿದ್ದಾರೆ.
   iv. 'ದಿ ವೈಟ್ ಬುಕ್' ಆಕೆಯ ಆತ್ಮಚರಿತ್ರೆಯ ಕೃತಿ.
   A) iii ಮತ್ತು iv ಮಾತ್ರ
   B) i ಮತ್ತು ii ಮಾತ್ರ
   C) ii ಮತ್ತು iii ಮಾತ್ರ
   D) ಎಲ್ಲವೂ ಸರಿಯಾಗಿದೆ

4. ಕೆಳಗಿನವುಗಳಲ್ಲಿ ಸರಿಯಾದ ಜೋಡಿಯನ್ನು ಕಂಡುಹಿಡಿಯಿರಿ.
   i. 1885 – ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅನ್ನು ಸ್ಥಾಪಿಸಲಾಯಿತು.
   ii. 1907 – ಸೂರತ್ ಸಮ್ಮೇಳನದಲ್ಲಿ ಕಾಂಗ್ರೆಸ್ ವಿಭಜನೆ.
   iii. 1934 – ಗಾಂಧಿ ಕಾಂಗ್ರೆಸ್‌ನ ಅಧ್ಯಕ್ಷರಾದರು.
   iv. 1929 – ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಲಾಹೋರ್ ಸಮ್ಮೇಳನ.
   A) i, ii ಮತ್ತು iv ಮಾತ್ರ
   B) ii, iii, iv ಮಾತ್ರ
   C) iii ಮತ್ತು iv ಮಾತ್ರ
   D) ಎಲ್ಲವೂ ಸರಿಯಾಗಿವೆ

5. 2024 ರಲ್ಲಿ ನಡೆದ BRICS ಶೃಂಗಸಭೆಗೆ ಸಂಬಂಧಿಸಿದ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?
   i. 16ನೇ ಶೃಂಗಸಭೆಯು ಕಜ಼ಾನ್‌ನಲ್ಲಿ ನಡೆಯಿತು.
   ii. ಕಜ಼ಾನ್ ಚೀನಾದಲ್ಲಿದೆ.
   iii. BRICSನ ಪ್ರಧಾನ ಕಛೇರಿಯು ನವದೆಹಲಿಯಲ್ಲಿದೆ.
   iv. BRICS ಅನ್ನು 2009 ರಲ್ಲಿ ರಚಿಸಲಾಯಿತು.

   A) i ಮತ್ತು ii ಮಾತ್ರ  B) ii ಮತ್ತು iii ಮಾತ್ರ
   C) iii ಮತ್ತು iv ಮಾತ್ರ  D) i ಮತ್ತು iv ಮಾತ್ರ

6. ಕೆಳಗಿನವುಗಳಿಂದ ಇಸ್ರೋಗೆ ಸಂಬಂಧಿಸಿದ ಸರಿಯಾದ ಹೇಳಿಕೆಯನ್ನು ಕಂಡುಹಿಡಿಯಿರಿ.
   i. ಇಸ್ರೋವನ್ನು 1998 ರಲ್ಲಿ ಸ್ಥಾಪಿಸಲಾಯಿತು.
   ii. ಇದರ ಪ್ರಧಾನ ಕಛೇರಿಯು ಕಲ್ಕತ್ತಾದ ಅಂತರಿಕ್ಷ ಭವನದಲ್ಲಿದೆ.
   iii. ಇದರ ಮೊದಲ ಅಧ್ಯಕ್ಷರು ವಿಕ್ರಮ್ ಸಾರಾಭಾಯ್.
   iv. ವಿಕ್ರಮ್ ಸಾರಾಭಾಯ್ ಸ್ಪೇಸ್ ಸೆಂಟರ್ ತಿರುವನಂತಪುರಂನಲ್ಲಿದೆ.

   A) i ಮತ್ತು ii ಮಾತ್ರ  B) iii ಮತ್ತು iv ಮಾತ್ರ
   C) i ಮತ್ತು iv ಮಾತ್ರ  D) ii ಮತ್ತು iii ಮಾತ್ರ

7. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಲಬಾರ್‌ನಲ್ಲಿ ಪ್ರಕಟಗೊಳ್ಳುತ್ತಿದ್ದ 'ಅಲ್ ಅಮೀನ್' ಪತ್ರಿಕೆಯ ಬಗೆಗಿನ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?
   i. ಇದು ಮುಹಮ್ಮದ್ ಅಬ್ದುರ್ ರಹಿಮಾನ್ ಸಾಹಿಬ್ ಅವರ ನೇತೃತ್ವದಲ್ಲಿ ಪ್ರಾರಂಭವಾಯಿತು.
   ii. ಇದನ್ನು 12 ಅಕ್ಟೋಬರ್ 1924 ರಂದು ಪ್ರಾರಂಭಿಸಲಾಯಿತು.
   iii. 1939ರಲ್ಲಿ ಬ್ರಿಟೀಷ್ ಸರ್ಕಾರವು ಪತ್ರಿಕೆಯನ್ನು ನಿಷೇಧಿಸಿತು.
   iv. ಪತ್ರಿಕೆಯ ಕಛೇರಿಯು ತಾನೂರಿನಲ್ಲಿತ್ತು.

   A) i, ii, iii ಮಾತ್ರ  B) ii ಮತ್ತು iii ಮಾತ್ರ
   C) iii ಮಾತ್ರ  D) iv ಮಾತ್ರ

8. ಕೆಳಗಿನವುಗಳಿಂದ ತಪ್ಪಾದ ಜೋಡಿಯನ್ನು ಕಂಡುಹಿಡಿಯಿರಿ.
   i. ಎಳುತಚ್ಚನ್ ಪ್ರಶಸ್ತಿ – ಎನ್. ಎಸ್. ಮಾಧವನ್
   ii. ವಯಲಾರ್ ಪ್ರಶಸ್ತಿ – ಅಶೋಕನ್ ಚರುವಿಲ್
   iii. ಕೇರಳ ಜ್ಯೋತಿ ಪ್ರಶಸ್ತಿ – ಎಂ. ಕೆ. ಸಾನು
   iv. ಒಡಕ್ಕುಳಲ್ ಪ್ರಶಸ್ತಿ – ಡಿ. ವಿನಯಚಂದ್ರನ್

   A) i ಮಾತ್ರ  B) ii ಮಾತ್ರ  C) iii ಮಾತ್ರ  D) iv ಮಾತ್ರ

9. ಈ ಕೆಳಗಿನವುಗಳಲ್ಲಿ ಘಟನೆಗಳ ಸರಿಯಾದ ಕಾಲಾನುಕ್ರಮ ಯಾವುದು ?
   i. ಅದಿರ್ಥಿ ಗಾಂಧಿಯವರ ಮರಣ
   ii. ಮಲಬಾರ್ ದಂಗೆ
   iii. ದೇವಾಲಯ ಪ್ರವೇಶ ಘೋಷಣೆ
   iv. ಜವಾಹರ್‌ಲಾಲ್ ನೆಹರೂ ಅವರ ಮರಣ

   A) ii, iii, iv, i  B) ii, i, iv, iii  C) i, ii, iii, iv  D) iii, i, iv, ii

10. ಕೊಚ್ಚಿ ಮೆಟ್ರೋಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?
    i. ಕೊಚ್ಚಿ ಮೆಟ್ರೋವನ್ನು 2017 ರ ಜೂನ್ 17 ರಂದು ಉದ್ಘಾಟಿಸಲಾಯಿತು.
    ii. ಇದನ್ನು KMRL ನಡೆಸುತ್ತಿದೆ.
    iii. ಕೊಚ್ಚಿ ವಾಟರ್ ಮೆಟ್ರೋ ಎಂಬುದು ಕೊಚ್ಚಿ ಮೆಟ್ರೋದ ಒಂದು ಸಹಾಯಕ ಜಲಮಾರ್ಗ ಯೋಜನೆಯಾಗಿದೆ.
    iv. ಇದು ಭಾರತದ 18ನೇ ಮೆಟ್ರೋ ರೈಲು ಮಾರ್ಗವಾಗಿದೆ.
    A) i, ii, iv ಮಾತ್ರ
    B) ii, iii, iv ಮಾತ್ರ
    C) i, ii, iii ಮಾತ್ರ
    D) ಎಲ್ಲವೂ ಸರಿಯಾಗಿವೆ

11. ಕೀಬುಲ್ ಲಮ್ಜಾವೊ ರಾಷ್ಟ್ರೀಯ ಉದ್ಯಾನವನ ಇರುವ ರಾಜ್ಯವನ್ನು ಹೆಸರಿಸಿ.
    A) ಮಣಿಪುರ
    B) ಮೇಘಾಲಯ
    C) ತ್ರಿಪುರ
    D) ನಾಗಾಲ್ಯಾಂಡ್

12. ಪುರಸಭೆ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸಲು ನಗರಗೃಹ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡ ಭಾರತದ ಮೊದಲ ನಗರ
    A) ಅಹಮದಾಬಾದ್
    B) ಜೈಪುರ
    C) ವಡೋದರ
    D) ಸೂರತ್

13. ಭಾರತದಲ್ಲಿ ಜೂನ್ ತಿಂಗಳಿನಿಂದ ಪ್ರಾರಂಭವಾಗಿ ಸೆಪ್ಟೆಂಬರ್ ತಿಂಗಳವರೆಗೆ ಇರುವ ಕೃಷಿ ಕಾಲಮಾನ
    A) ಝೈದ್
    B) ಮಾನ್ಸೂನ್
    C) ರಾಬಿ
    D) ಖಾರಿಫ್

14. ಅಳಿದುಳಿದ ಪರ್ವತಗಳು __________ ನ ಉದಾಹರಣೆಗಳಾಗಿವೆ.
    A) ಅರಾವಳಿ
    B) ಸಹ್ಯಾದ್ರಿ
    C) ಏಲಮಲ ಬೆಟ್ಟಗಳು
    D) ನೀಲಗಿರಿ ಬೆಟ್ಟಗಳು

15. ಸ್ಫಟಿಕದಂತಹ ರೂಪಾಂತರ ಶಿಲೆಗಳ ಗಣಿಗಾರಿಕೆಯಿಂದ ರೂಪುಗೊಂಡ ಮಣ್ಣು
    A) ಪರ್ವತ ಮಣ್ಣು
    B) ಕೆಂಪು ಮಣ್ಣು
    C) ಲ್ಯಾಟರೈಟ್ ಮಣ್ಣು
    D) ಕಪ್ಪು ಮಣ್ಣು

16. ವಿದ್ಯುತ್ ತಂತಿ, ಎಲೆಕ್ಟ್ರಾನಿಕ್ಸ್ ಮತ್ತು ರಾಸಾಯನಿಕ ವ್ಯವಸ್ಥೆಗಳಲ್ಲಿ ಬಳಸಲಾಗುವ ತಾಮ್ರದ ನಿಕ್ಷೇಪಗಳು ಹೆಚ್ಚಾಗಿ ಈ ರಾಜ್ಯದಲ್ಲಿ ಕಂಡುಬರುತ್ತವೆ
    A) ಉತ್ತರಪ್ರದೇಶ
    B) ಮಧ್ಯಪ್ರದೇಶ
    C) ಕರ್ನಾಟಕ
    D) ಪಶ್ಚಿಮ ಬಂಗಾಳ

17. ಉತ್ಕೃಷ್ಟ ನಮೂನೆಯ ಕಲ್ಲಿದ್ದಲು ಇದಾಗಿದೆ
    A) ಪೀಟ್
    B) ಲಿಗ್ನೈಟ್
    C) ಬಿಟುಮಿನಸ್
    D) ಆಂಥ್ರಾಸೈಟ್

18. ಕಾನೂನಿನ ಮೂಲಕ ಮೇಲ್ಛಾವಣಿಯಲ್ಲಿ ಮಳೆ ನೀರಿನ ಕೊಯ್ಲನ್ನು ಕಡ್ಡಾಯಗೊಳಿಸಿದ ಮೊದಲ ರಾಜ್ಯ
    A) ಜಾರ್ಖಂಡ್
    B) ಒಡಿಶಾ
    C) ತಮಿಳುನಾಡು
    D) ತೆಲಂಗಾಣ

19. ಮೆಕ್ಸಿಕೋದಲ್ಲಿ ಕಡಿದು ಸುಡುವ ಕೃಷಿಯನ್ನು __________ ಎಂದು ಕರೆಯಲಾಗುತ್ತದೆ.
    A) ಮಿಲ್ಪಾ B) ಮಾಸೋಲ್ C) ರೋಕಾ D) ಲಡಾಂಗ್

20. ಚಿಪ್ಕೋ ಚಳುವಳಿಯನ್ನು ಯಾವುದರ ಸಂಯೋಗದೊಂದಿಗೆ ಓದಬಹುದು ?
    A) ಚೋಟಾ ನಾಗಪುರ ಪ್ರಸ್ಥಭೂಮಿಯಲ್ಲಿ ಗಣಿಗಾರಿಕೆಯ ನಿಯಂತ್ರಣ
    B) ಪಶ್ಚಿಮ ಘಟ್ಟಗಳಲ್ಲಿ ನಕ್ಷತ್ರ ಆಮೆಗಳ ಸಂರಕ್ಷಣೆ
    C) ಯಮುನಾ ನದಿಯಲ್ಲಿ ರಾಸಾಯನಿಕ ಮಾಲಿನ್ಯ ತಡೆಗಟ್ಟುವಿಕೆ
    D) ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಸ್ಥೂಪಿಕ ಅರಣ್ಯನಾಶವನ್ನು ತಡೆಗಟ್ಟುವುದು

21. 1957 ರಲ್ಲಿ ಕೇರಳ ವಿಶ್ವವಿದ್ಯಾನಿಲಯವಾಗಿ ಮಾರ್ಪಟ್ಟ ಟ್ರಾವಂಕೂರ್ ವಿಶ್ವವಿದ್ಯಾಲಯವನ್ನು __________ ರಲ್ಲಿ ಸ್ಥಾಪಿಸಲಾಯಿತು.
    A) 1937 B) 1936 C) 1930 D) 1935

22. ಈ ಕೆಳಗಿನ ಯಾವ ಹೋರಾಟಕ್ಕೆ ಸಂಬಂಧಿಸಿದಂತೆ ಗಾಂಧೀಯವರು “ಮಾಡು ಇಲ್ಲವೇ ಮಡಿ” ಎಂಬ ಘೋಷಣೆಯನ್ನು ಹುಟ್ಟುಹಾಕಿದರು ?
    A) ಚಂಪಾರಣ್ ಸತ್ಯಾಗ್ರಹ B) ಉಪ್ಪಿನ ಸತ್ಯಾಗ್ರಹ
    C) ಕ್ವಿಟ್ ಇಂಡಿಯಾ ಚಳುವಳಿ D) ಅಸಹಕಾರ ಚಳುವಳಿ

23. ಈ ಕೆಳಗಿನ ಕೃತಿಗಳಲ್ಲಿ ಯಾವುದು ಶ್ರೀ ನಾರಾಯಣಗುರು ಅವರ ಕೃತಿಯಲ್ಲ ?
    A) ದೈವದಶಕಂ B) ವೇದಾಧಿಕಾರ ನಿರೂಪಣಂ
    C) ನವಮಂಜರಿ D) ದರ್ಶನ ಮಾಲಾ

24. ನವೆಂಬರ್ 11 ರಂದು ಆಚರಿಸಲಾಗುವ ರಾಷ್ಟ್ರೀಯ ಶಿಕ್ಷಣ ದಿನವು ಈ ಕೆಳಗಿನ ಯಾರಿಗೆ ಸಂಬಂಧಿಸಿದೆ ?
    A) ಸರ್ದಾರ್ ವಲ್ಲಭಭಾಯಿ ಪಟೇಲ್ B) ಮೌಲಾನಾ ಅಬುಲ್ ಕಲಾಂ ಆಜಾದ್
    C) ಡಾ. ಎಸ್. ರಾಧಾಕೃಷ್ಣನ್ D) ಡಾ.ರಾಜೇಂದ್ರ ಪ್ರಸಾದ್

25. ಕೆಳಗೆ ಹೆಸರಿಸಲಾಗಿರುವ ಲೇಖಕರಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಪಡೆಯದ ಮಲಯಾಳಂ ಲೇಖಕ
    A) ಅಕ್ಕಿತಂ ಅಚ್ಯುತನ್ ನಂಬೂದಿರಿ B) ಎಂ.ಟಿ. ವಾಸುದೇವನ್ ನಾಯರ್
    C) ಓಲಪ್ಪಮಣ್ಣ ಸುಬ್ರಹ್ಮಣ್ಯಂ ನಂಬೂದಿರಿ D) ಓ. ಎನ್. ವಿ. ಕುರುಪ್

26. ಕೆಳಗಿನವುಗಳಲ್ಲಿ ಭಾರತೀಯ ಶಿಕ್ಷಣಕ್ಕೆ ಸಂಬಂಧಿಸಿದ ಆಯೋಗಗಳು
    i. ರಾಧಾಕೃಷ್ಣನ್ ಆಯೋಗ
    ii. ರಂಗನಾಥ್ ಮಿಶ್ರಾ ಆಯೋಗ
    iii. ಕೊಠಾರಿ ಆಯೋಗ
    iv. ಮುಖರ್ಜಿ ಆಯೋಗ
    A) i ಮತ್ತು iii ಸರಿಯಾಗಿವೆ B) ii ಮತ್ತು iv ಸರಿಯಾಗಿವೆ
    C) i ಮತ್ತು iv ಸರಿಯಾಗಿವೆ D) ii ಮತ್ತು iii ಸರಿಯಾಗಿವೆ

27. ತೇಭಾಗ ರೈತ ಕಾರ್ಮಿಕ ಮುಷ್ಕರ ಎಲ್ಲಿ ನಡೆಯಿತು ?
    A) ಹೈದರಾಬಾದ್ B) ಬಾಂಬೆ (ಮುಂಬೈ) C) ಬಿಹಾರ D) ಬಂಗಾಳ

28. ಭಾರತೀಯ ನವೋದಯದ ಪಿತಾಮಹ
    A) ಈಶ್ವರಚಂದ್ರ ವಿದ್ಯಾಸಾಗರ್ B) ಸ್ವಾಮಿ ದಯಾನಂದ ಸರಸ್ವತಿ
    C) ರಾಜಾರಾಮ್ ಮೋಹನ್‌ರಾಯ್ D) ಸ್ವಾಮಿ ವಿವೇಕಾನಂದ

29. ಭಾರತದಲ್ಲಿ ಈ ಕೆಳಗಿನವುಗಳಲ್ಲಿ ಡೇನ್‌ಮಾರ್ಕಿನವರ ಪ್ರಾಬಲ್ಯ ಎಲ್ಲಿದೆ ?
    A) ಗೋವಾ B) ಪಾಂಡಿಚೇರಿ C) ಚಂದ್ರನಗರ D) ಟ್ರಾಂಕಿಬಾರ್

30. ಈ ಕೆಳಗಿನ ಘಟನೆಗಳಲ್ಲಿ ಯಾವುದು ತಪ್ಪಾಗಿದೆ ?
    A) ಕುಂದರ ಘೋಷಣೆ 1809 B) ಕೊಲಾಚೆಲ್ ಕದನ 1741
    C) ಅಟ್ಟಿಂಗಲ್ ದಂಗೆ 1721 D) ಕುರಿಚ್ಯದಂಗೆ 1810

31. ಮೂಲಭೂತ ಕರ್ತವ್ಯಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?
    i. 1950 ರಲ್ಲಿ ಜಾರಿಗೆ ಬಂದ ಭಾರತದ ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ.
    ii. ಸರ್ಕಾರಿಯಾ ಆಯೋಗದ ಶಿಫಾರಸ್ಸಿನ ಮೇರೆಗೆ ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಗಿದೆ.
    iii. 1976 ರ 42ನೇ ಸಾಂವಿಧಾನಿಕ ತಿದ್ದುಪಡಿಯು ನಾಗರಿಕರು ಅನುಸರಿಸಬೇಕಾದ 10 ಕರ್ತವ್ಯಗಳನ್ನು ಸೇರಿಸಿದೆ.
    A) i, ii B) i, iii C) ii, iii D) i, ii, iii

32. ಭಾರತದ ರಾಷ್ಟ್ರೀಯ ಗೀತೆಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ ?
    i. ಬಂಕಿಮ್ ಚಂದ್ರ ಚಟರ್ಜಿಯವರು ರಚಿಸಿದ್ದಾರೆ.
    ii. ಹಿಂದಿ ಭಾಷೆಯಲ್ಲಿ ರಚಿಸಲಾಗಿದೆ.
    iii. ರಾಷ್ಟ್ರಗೀತೆಯು ರಾಷ್ಟ್ರೀಯ ಗೀತೆಯೊಂದಿಗೆ ಸಮಾನ ಸ್ಥಾನಮಾನವನ್ನು ಹೊಂದಿದೆ.
    A) i, ii B) ii, iii C) i, ii, iii D) i, iii

33. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಬಗೆಗಿನ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ ?
    i. ಇದು ಮಾನವ ಹಕ್ಕುಗಳ ಸಂರಕ್ಷಣಾ ಕಾಯಿದೆ, 1993 ರ ಅಡಿಯಲ್ಲಿ ಅಸ್ತಿತ್ವಕ್ಕೆ ಬಂದಿತು.
    ii. ಮೊದಲ ಅಧ್ಯಕ್ಷರು ನ್ಯಾಯಮೂರ್ತಿ ರಂಗನಾಥ್ ಮಿಶ್ರಾ.
    iii. ಮೊದಲ ಆಯೋಗವು 10 ಡಿಸೆಂಬರ್ 1993 ರಂದು ಅಸ್ತಿತ್ವಕ್ಕೆ ಬಂದಿತು.
    iv. ಅಧ್ಯಕ್ಷರ ಅವಧಿಯು 3 ವರ್ಷಗಳು ಅಥವಾ 70 ವರ್ಷ ಪ್ರಾಯ.
    A) i, ii, iii, iv B) i, ii, iv C) ii, iii, iv D) i, iii, iv

34. 2024 ರ ಕೇರಳ ಪ್ರಭಾ ಪ್ರಶಸ್ತಿ ವಿಜೇತರು
    A) ಎಂ. ಕೆ. ಸಾನು, ಎಸ್. ಸೋಮನಾಥ್ B) ಎಂ. ಕೆ. ಸಾನು, ಎನ್. ಎಸ್. ಮಾಧವನ್
    C) ಎಸ್. ಸೋಮನಾಥ್, ಭುವನೇಶ್ವರಿ D) ಎಸ್. ಸೋಮನಾಥ್, ಶೈಜಾ ಬೇಬಿ

35. ಭಾರತದ ಸಂವಿಧಾನದ 25 ರಿಂದ 28ನೇ ವಿಧಿಗಳಲ್ಲಿ ಖಾತ್ರಿಪಡಿಸಲಾದ ಧಾರ್ಮಿಕ ಸ್ವಾತಂತ್ರ್ಯದಲ್ಲಿ ಈ ಕೆಳಗಿನವುಗಳಲ್ಲಿ ಯಾವುದನ್ನು ಸೇರಿಸಲಾಗಿಲ್ಲ ?
   i. ಆಯ್ಕೆಯ ಧರ್ಮವನ್ನು ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕು.
   ii. ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಸ್ಥಿರ ಮತ್ತು ಚರ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಹಕ್ಕು.
   iii. ಸರ್ಕಾರಿ ಸ್ವಾಮ್ಯದ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆಯನ್ನು ನಿಷೇಧಿಸುವುದು.
   iv. ತಮ್ಮದೇ ಆದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ನಡೆಸುವ ಅಲ್ಪಸಂಖ್ಯಾತರ ಹಕ್ಕು.

   A) ii, iii B) iii, iv C) iii D) iv

36. 2024ರ ಬ್ರಿಕ್ಸ್ ಶೃಂಗಸಭೆ ಎಲ್ಲಿ ನಡೆಯಿತು ?
   A) ರಷ್ಯಾ B) ಭಾರತ C) ಇರಾನ್ D) ಸಿಂಗಾಪುರ

37. ಕುರಿಚ್ಯಾ ಗಲಭೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?
   i. ಕುರಿಚ್ಯಾ ದಂಗೆಯು 1812 ರಲ್ಲಿ ನಡೆಯಿತು.
   ii. ವಯನಾಡ್ ಜಿಲ್ಲೆಯ ಕುರಿಚ್ಯ–ಕುಂಬಾರ ಸಮುದಾಯಕ್ಕೆ ಸೇರಿದ ಜನರು ಗಲಭೆಯ ನೇತೃತ್ವ ವಹಿಸಿದ್ದರು.
   iii. ರಾಮನಂಬಿ ಮುಖ್ಯ ನಾಯಕರಾಗಿದ್ದರು.
   iv. ಮಲಬಾರ್‌ನಲ್ಲಿ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯು ಜಾರಿಗೊಳಿಸಿದ ಜನವಿರೋಧಿ ತೆರಿಗೆ ನೀತಿಗಳ ವಿರುದ್ಧ ಒಂದು ದಂಗೆಯಾಗಿತ್ತು.

   A) i, ii, iii, iv B) i, ii, iii C) i, iii, iv D) ii, iii, iv

38. ಕೇರಳದ ಮೊದಲ ಮಹಿಳಾ ಪತ್ರಿಕೆ
   A) ಸಂಘ ಮಿತ್ರ B) ಕ್ರೈಸ್ತವಾ ಮಹಿಳಾಮಣಿ
   C) ಕೇರಳೀಯ ಸುಗುಣ ಬೋಧಿನಿ D) ಮೇರಿ ರಾಣಿ

39. ಮಾಹಿತಿ ಹಕ್ಕು ಆಯೋಗದ ಬಗೆಗಿನ ಸಂಗತಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿದೆ ?
   i. ಮಾಹಿತಿ ಹಕ್ಕು ಚಳುವಳಿ ರಾಜಸ್ಥಾನದಲ್ಲಿ ಪ್ರಾರಂಭವಾಯಿತು.
   ii. ಇದನ್ನು ಮಜ್ದೂರ್ ಕಿಸಾನ್ ಶಕ್ತಿ ಸಂಘದನ್ ಎಂಬ ಸಂಘಟನೆಯು ಮುನ್ನಡೆಸಿತು.
   iii. 2005ರ ಅಕ್ಟೋಬರ್ 12ರಂದು ಜಾರಿಗೆ ಬಂದಿತು.

   A) i, ii B) i, iii C) i, ii, iii D) ii, iii

40. 2024 ರಲ್ಲಿ ಉಪಚುನಾವಣೆ ನಡೆಯಲಿರುವ ವಿಧಾನಸಭಾ ಕ್ಷೇತ್ರಗಳು
   A) ವಯನಾಡ್, ಚೇಲಕ್ಕರ B) ವಯನಾಡ್, ಚೇಲಕ್ಕರ, ಪಾಲಕ್ಕಾಡ್
   C) ಪಾಲಕ್ಕಾಡ್, ವಯನಾಡ್ D) ಪಾಲಕ್ಕಾಡ್, ಚೇಲಕ್ಕರ

41. ಕೇರಳದಲ್ಲಿ ಎಷ್ಟು ನದಿಗಳು ಪಶ್ಚಿಮಕ್ಕೆ ಹರಿಯುತ್ತವೆ ?
   A) 41 B) 3 C) 4 D) 44

42. ಎರಡು ರಾಜ್ಯಗಳೊಂದಿಗೆ ಗಡಿಯನ್ನು ಹಂಚಿಕೊಂಡಿರುವ ಕೇರಳದ ಏಕೈಕ ಜಿಲ್ಲೆ ಯಾವುದು ?
A) ಮಲಪ್ಪುರಂ B) ಪಾಲಕ್ಕಾಡ್ C) ಇಡುಕ್ಕಿ D) ವಯನಾಡ್

43. ಕೇರಳದ ಮೊದಲ ಜಲವಿದ್ಯುತ್ ಯೋಜನೆ ಯಾವುದು ?
A) ಇಡುಕ್ಕಿ B) ಪಳ್ಳಿವಾಸಲ್ C) ಚೆಂಕುಳಂ D) ಇಡಮಲಯಾರ್

44. ಕೇರಳದಲ್ಲಿ ತೀರಾ ಸಾಮಾನ್ಯವಾಗಿ ಕಂಡುಬರುವ ಮಣ್ಣಿನ ವಿಧ ಯಾವುದು ?
A) ಎಕ್ಕಲ್ ಮಣ್ಣು B) ಕೆಂಪು ಮಣ್ಣು C) ಲ್ಯಾಟರೈಟ್ ಮಣ್ಣು D) ಕಪ್ಪು ಮಣ್ಣು

45. ರೆಡ್ ಡೇಟಾ ಬುಕ್‌ನಲ್ಲಿ ಪಟ್ಟಿ ಮಾಡಲಾಗಿರುವ ಕೇರಳದ ವನ್ಯಜೀವಿ ಅಭಯಾರಣ್ಯ
A) ಪರಂಬಿಕುಲಂ B) ಚೆಂತುರುಣಿ C) ಮುತಂಗ D) ಅರಾಳಮ್

46. ಆತ್ಮ ವಿದ್ಯಾ ಸಂಗಮವನ್ನು ಸ್ಥಾಪಿಸಿದವರು ಯಾರು ?
A) ಸಹೋದರನ್ ಅಯ್ಯಪ್ಪನ್
B) ಪಂಡಿತ್ ಕರುಪ್ಪನ್
C) ಪಲ್ಲತ್ ರಾಮನ್
D) ವಾಗ್ಭಟಾನಂದನ್

47. ಕೇರಳದಲ್ಲಿ ಎಷ್ಟು ಲೋಕಸಭಾ ಸ್ಥಾನಗಳಿವೆ ?
A) 20 B) 21 C) 19 D) 22

48. ಕೇರಳ ರಾಜ್ಯದ ಜಲಸಂಪನ್ಮೂಲ ಸಚಿವರು ಯಾರು ?
A) ಕೆ. ಕೃಷ್ಣನ್ ಕುಟ್ಟಿ
B) ರೋಶಿ ಆಗಸ್ಟಿನ್
C) ಜೆ. ಚಿಂಚು ರಾಣಿ
D) ಪಿ. ಪ್ರಸಾದ್

49. 1956 ರಲ್ಲಿ ಕೇರಳ ರಚನೆಯಾದಾಗ ಎಷ್ಟು ಜಿಲ್ಲೆಗಳಿದ್ದವು ?
A) 5 B) 4 C) 14 D) 7

50. ಕೇರಳದ ಪುನರುಜ್ಜೀವನಕ್ಕೆ ತಿರುವು ನೀಡಿದ ಅರುವಿಪುರಂನ ಲೋಕಾರ್ಪಣೆ ಮಾಡಿದ ಸಮಾಜ ಸುಧಾರಕ
A) ಕುಮಾರಗುರುದೇವನ್
B) ಅಯ್ಯಂಕಾಳಿ
C) ಚಟ್ಟಾಂಬಿ ಸ್ವಾಮಿಕಳ್
D) ಶ್ರೀ ನಾರಾಯಣ ಗುರು

51. ಕೇರಳದಲ್ಲಿ ಮೊದಲ ರೈಲುಮಾರ್ಗವನ್ನು ನಿರ್ಮಿಸಿದ ವರ್ಷ
A) 1841 B) 1851 C) 1861 D) 1871

52. ಪಯ್ಯನ್ನೂರಿನಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷರು ಯಾರಾಗಿದ್ದರು ?
A) ಗಾಂಧೀಜಿ
B) ಬ್ಯಾರಿಸ್ಟರ್ ಟಿ. ಪ್ರಕಾಶನ್
C) ಜವಾಹರಲಾಲ್ ನೆಹರೂ
D) ಕೆ. ಕೇಳಪ್ಪನ್

53. ಕೆಳಗಿನವುಗಳಲ್ಲಿ ಯಾವುದು ತಿರುವಾಂಕೂರಿನ ರಾಜಕೀಯ ಅಶಾಂತಿಗೆ ಸಂಬಂಧಿಸಿಲ್ಲ ?

A) ಪುನ್ನಪ್ರ–ವಯಲಾರ್ ಸಮರಂ
B) ನಿವರ್ತನಾ ಪ್ರಕ್ಷೋಭಂ
C) ಮಲಯಾಳಿ ಮೆಮೊರಿಯಲ್
D) ಕೀಳರಿಯೂರ್ ಬಾಂಬ್ ಕೇಸ್

54. ವೈಕಮ್ ಸತ್ಯಾಗ್ರಹದ ನೇತೃತ್ವವನ್ನು ಯಾರು ವಹಿಸಿದ್ದರು ?

A) ಟಿ. ಕೆ. ಮಾಧವನ್
B) ಎ. ಕೆ. ಗೋಪಾಲನ್
C) ಮನ್ನತ್ ಪದ್ಮನಾಭನ್
D) ಪಿ. ಕೃಷ್ಣಪಿಳ್ಳೆ

55. 1817ರಲ್ಲಿ ಗೌರಿ ಪಾರ್ವತಿಬಾಯಿಯವರು ಹೊರಡಿಸಿದ ಘೋಷಣೆಯಲ್ಲಿ ಗಮನಾರ್ಹವಾದ ಸುಧಾರಣೆ ಯಾವುದು ?

A) ಚನ್ನಾರ್ ಮಹಿಳೆಯರು ಮೈಮೇಲಿನ ಉಡುಪು ಧರಿಸುವ ಹಕ್ಕು ಹೊಂದಿದ್ದಾರೆ
B) ಮರುಮಕ್ಕಥಾಯಂ ವಿರುದ್ಧ ಕಾನೂನುಗಳು
C) ಏಕರೂಪದ ದಂಡಗಳು
D) ಪ್ರಾಥಮಿಕ ಶಿಕ್ಷಣವನ್ನು ಉಚಿತಗೊಳಿಸಲಾಯಿತು

56. ಯೋಗ ಕ್ಷೇಮ ಸಭೆಯ ರಚನೆಗೆ ಯಾರು ಮುಂದಾಳತ್ವ ವಹಿಸಿದರು ?

A) ಮನ್ನತ್ ಪದ್ಮನಾಭನ್
B) ವಿ. ಟಿ. ಭಟ್ಟತಿರಿಪ್ಪಾಡ್
C) ವೈಕುಂಟಸ್ವಾಮಿಗಳ್
D) ವಾಗ್ಭಟಾನಂದ

57. 1920ರಲ್ಲಿ ಮಂಜೇರಿಯಲ್ಲಿ ನಡೆದ ಮಲಬಾರ್ ರಾಷ್ಟ್ರೀಯ ಸಮ್ಮೇಳನದಲ್ಲಿ ಯಾವ ವಿಷಯವನ್ನು ಸೇರಿಸಲಾಗಿಲ್ಲ ?

A) ಆಡಳಿತಾತ್ಮಕ ಸುಧಾರಣೆ
B) ಹಿಡುವಳಿ ಸಮಸ್ಯೆ
C) ಜನಸಂಖ್ಯಾ ಅನುಪಾತ ಮೀಸಲಾತಿ
D) ಖಿಲಾಫತ್

58. ಮಲಯಾಳಂ ಭಾಷೆಯಲ್ಲಿ ಮೊದಲ ನಿಘಂಟನ್ನು ನೀಡಿದವರು ಯಾರು ?

A) ಡಾ. ಏಂಜೆಲೋಸ್ ಫ್ರಾನ್ಸಿಸ್
B) ಅರ್ನೋಸ್ ಪಥಿರಿ
C) ಬೆಂಜಮಿನ್ ಬೈಲಿ
D) ಡಾ. ಹರ್ಮನ್ ಗುಂಡರ್ಟ್

59. 1809ರಲ್ಲಿ ಕುಂದರ ಘೋಷಣೆಯನ್ನು ಹೊರಡಿಸಿದವರು ಯಾರು ?

A) ಪಳಸ್ಸಿ ರಾಜ
B) ಪಲಿಯತಚ್ಚನ್
C) ವೇಲುತಂಬಿ ದಳವ
D) ಮಾರ್ತಾಂಡ ವರ್ಮ

60. 1859ರಲ್ಲಿ ಜೇಮ್ಸ್ ಡಾರಾ ಕಾಯರ್ ಕಾರ್ಖಾನೆಯನ್ನು ಯಾವ ಸ್ಥಳದಲ್ಲಿ ಸ್ಥಾಪಿಸಲಾಯಿತು ?

A) ಆಲಪ್ಪುಳ
B) ಕೊಲ್ಲಂ
C) ವರ್ಕಳ
D) ಇವುಗಳಲ್ಲಿ ಯಾವುದೂ ಅಲ್ಲ

61. ಜೀವಗೋಳದಲ್ಲಿನ ಬದುಕನ್ನು ಉಲ್ಲೇಖಿಸಲು 'ಜೀವ ವೈವಿಧ್ಯ' ಎಂಬ ಪದವನ್ನು ಮೊದಲು ಬಳಸಿದವರು ಯಾರು ?

A) ಹ್ಯೂಗೋ ಡಿ ವ್ರೈಸ್
B) ರಾಚೆಲ್ ಕಾರ್ಸನ್
C) ವಾಲ್ಟರ್ ಜಿ. ರೋಸೆನ್
D) ಅರ್ನ್ಸ್ಟ್ ಹೆಕೆಲ್

62. ತಾಯಿ ಮತ್ತು ಹುಟ್ಟಲಿರುವ ಮಗುವಿನ ನಡುವೆ ರಕ್ತ ಮಿಶ್ರಣವಿಲ್ಲದೆ ಭೌತ ಪದಾರ್ಥಗಳ ವಿನಿಮಯಕ್ಕೆ ಯಾವ ಭಾಗವು ಸಹಾಯ ಮಾಡುತ್ತದೆ ?

A) ಜರಾಯು
B) ಆಮ್ನಿಯೋಟಿಕ್ ದ್ರವ
C) ಗರ್ಭ
D) ಹೊಕ್ಕುಳಬಳ್ಳಿ

63. ಎಲ್ಲಾ ಕಡೆಗಳಲ್ಲಿ ಏಕರೂಪದ ದಪ್ಪ ಕೋಶಭಿತ್ತಿಗಳನ್ನು ಹೊಂದಿರುವ ಒಂದು ರೀತಿಯ ಕೋಶ

A) ಪ್ಯಾರೆಂಖೈಮಾ
B) ಕೊಲೆಂಖೈಮಾ
C) ಫ್ಲೋಯಮ್
D) ಸ್ಕ್ಲೀರಂಖೈಮಾ

64. ಪೋಷಕಾಂಶಗಳನ್ನು ಹೀರಿಕೊಳ್ಳಲು ಮೇಲ್ಮೈ ಪ್ರದೇಶವನ್ನು ವೃದ್ಧಿಸಲು ಸಹಾಯಮಾಡುವ ಸಣ್ಣ ಕರುಳಿನ ಭಾಗ

A) ಲೆಂಟಿಸೆಲ್
B) ವಿಲ್ಲೆಸ್‌ಗಳು
C) ಡೆಂಟೈನ್
D) ಅಲ್ವಿಯೋಲಸ್‌ಗಳು

65. ಮೂತ್ರಪಿಂಡಕ್ಕೆ ರಕ್ತವನ್ನು ಒಯ್ಯುವ ನಾಳ

A) ಮೂತ್ರಪಿಂಡದ ಅಭಿಧಮನಿ
B) ಕೆಳಮಟ್ಟದ ವೆನ ಕೇವ
C) ಮೂತ್ರಪಿಂಡದ ಅಪಧಮನಿ
D) ಮೇಲ್ಮಟ್ಟದ ವೆನ ಕೇವ

66. ಕಣ್ಣಿನ ಅಸ್ವಸ್ಥತೆಗಳಿಗೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಕಂಡುಹಿಡಿಯಿರಿ.

i. ಸಿರೋಫ್ಥಾಲ್ಮಿಯಾ ಕಣ್ಣಿನ ಮಸೂರದ ಸ್ಥಿತಿಸ್ಥಾಪಕತ್ವದ ನಷ್ಟದಿಂದ ಉಂಟಾಗುವ ಕಾಯಿಲೆಯಾಗಿದೆ.

ii. ವಿಟಮಿನ್ ಬಿ ಕೊರತೆಯು ರಾತ್ರಿ ಕುರುಡುತನಕ್ಕೆ ಕಾರಣವಾಗುತ್ತದೆ.

iii. ಗ್ಲುಕೋಮಾ ಎನ್ನುವುದು ಕಣ್ಣಿನೊಳಗೆ ಹೆಚ್ಚಿದ ಒತ್ತಡದ ಸ್ಥಿತಿಯಾಗಿದೆ.

iv. ಕಣ್ಣಿನ ಪೊರೆ ಎಂಬುದು ಕಣ್ಣಿನ ಮಸೂರವು ಅಪಾರದರ್ಶಕವಾಗುವ ಸ್ಥಿತಿಯಾಗಿದೆ.

A) i, iv ಸರಿಯಾಗಿವೆ
B) iii, iv ಸರಿಯಾಗಿವೆ
C) ii, iv ಸರಿಯಾಗಿವೆ
D) i, ii ಸರಿಯಾಗಿವೆ

67. ನ್ಯೂಕ್ಲಿಯಸ್ ಹೊಂದಿರದ ಏಕಕೋಶೀಯ ಜೀವಿಗಳನ್ನು ಒಳಗೊಂಡಿರುವ ವರ್ಗ

A) ಶಿಲೀಂಧ್ರಗಳು
B) ಪ್ರೊಟಿಸ್ಟಾ
C) ಮೋನೇರಾ
D) ಯುಕಾರ್ಯ

68. ಸ್ಥೂಲಕಾಯತೆಯು ಯಾವ ಹಾರ್ಮೋನ್ ಏರಿಳಿತಕ್ಕೆ ಸಂಬಂಧಿಸಿದ ಒಂದು ಸ್ಥಿತಿಯಾಗಿದೆ ?
A) ವೆಸೊಪ್ರೆಸಿನ್
B) ಥೈರಾಕ್ಸಿನ್
C) ಅಡ್ರಿನಾಲಿನ್
D) ಸೊಮಾಟೊಟ್ರೋಪಿನ್

69. ಸೆಲ್ಯೂಲರ್ (ಕೋಶಿಯ) ಉಸಿರಾಟಕ್ಕೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಕಂಡುಹಿಡಿಯಿರಿ.
i. ಸೆಲ್ಯೂಲರ್ (ಕೋಶಿಯ) ಉಸಿರಾಟದ ಮೊದಲ ಹಂತವು ಸೈಟೋಪ್ಲಾಸಂನಲ್ಲಿ ಮತ್ತು ಎರಡನೇ ಹಂತವು ರೈಬೋಜೋಮ್‌ನಲ್ಲಿ ನಡೆಯುತ್ತದೆ.
ii. ಗ್ಲೈಕೋಲಿಸಿಸ್‌ಗೆ ಮೊದಲ ಹಂತವಾಗಿ ಆಮ್ಲಜನಕದ ಅಗತ್ಯವಿದೆ.
iii. ಗ್ಲೈಕೋಲಿಸಿಸ್ 28 ATP ಅಣುಗಳನ್ನು ಉಂಟುಮಾಡುತ್ತದೆ.
iv. ಗ್ಲೈಕೋಲಿಸಿಸ್‌ನಲ್ಲಿ ಗ್ಲುಕೋಸ್ ಪೈರುವಿಕ್ ಆಮ್ಲವಾಗಿ ಪರಿವರ್ತನೆಗೊಳ್ಳುತ್ತದೆ.
A) ii, iv ಸರಿಯಾಗಿವೆ
B) iii, iv ಸರಿಯಾಗಿವೆ
C) i, iii ಸರಿಯಾಗಿವೆ
D) iv ಸರಿಯಾಗಿದೆ

70. ಮಾನವ ದೇಹದ ಯಾವ ಅಂಗದಲ್ಲಿ ವಿಟ್ರಿಯಸ್ ದ್ರವ ಕಂಡುಬರುತ್ತದೆ ?
A) ಶ್ವಾಸಕೋಶಗಳು
B) ಕಣ್ಣುಗಳು
C) ಕಿವಿಗಳು
D) ಮೂತ್ರಪಿಂಡಗಳು

71. ಜನರೇಟರ್‌ನಲ್ಲಿ ನಡೆಯುವ ಶಕ್ತಿಯ ಪರಿವರ್ತನೆ
A) ಯಾಂತ್ರಿಕ ಶಕ್ತಿ → ವಿದ್ಯುತ್ ಶಕ್ತಿ
B) ವಿದ್ಯುತ್ ಶಕ್ತಿ → ಯಾಂತ್ರಿಕ ಶಕ್ತಿ
C) ಸೌರಶಕ್ತಿ → ವಿದ್ಯುತ್ ಶಕ್ತಿ
D) ವಿದ್ಯುತ್ ಶಕ್ತಿ → ಸೌರಶಕ್ತಿ

72. ಪರಮಾಣು ರಿಯಾಕ್ಟರ್‌ನಲ್ಲಿರುವ ಇಂಧನ ಯಾವುದು ?
A) ಕಾರ್ಬೈಡ್
B) ಸಂವರ್ಧಿತ ಯುರೇನಿಯಂ
C) ಹೈಡ್ರೋಜನ್
D) ಥೋರಿಯಮ್

73. ವಸ್ತುವಿನ ವೇಗ ದ್ವಿಗುಣಗೊಂಡರೆ ಚಲನ ಶಕ್ತಿ
A) ಇದು ಎರಡು ಬಾರಿ ಇರುತ್ತದೆ
B) ಇದು ಅರ್ಧದಷ್ಟು ಇರುತ್ತದೆ
C) ಇದು ಕಾಲುಭಾಗದಷ್ಟು ಇರುತ್ತದೆ
D) ಇದು ನಾಲ್ಕು ಪಟ್ಟು ಇರುತ್ತದೆ

74. ಕೆಳಗಿನವುಗಳಲ್ಲಿ ಯಾವುದು ಗುಂಪಿಗೆ ಸೇರಿಲ್ಲ ?
A) ಪ್ರವೇಗ
B) ವೇಗವರ್ಧನೆ
C) ವೇಗ
D) ವರ್ಗಾವಣೆ

75. ವಾತಾವರಣದ ಒತ್ತಡವನ್ನು ಅಳೆಯಲು ಬಳಸುವ ಉಪಕರಣ
A) ಲ್ಯಾಕ್ಟೋಮೀಟರ್
B) ಬ್ಯಾರೋಮೀಟರ್
C) ಥರ್ಮೋಮೀಟರ್
D) ಹೈಡ್ರೋಮೀಟರ್

76. ಕೆಲವು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ಯಾವುದು ಜೆ. ಜೆ. ಥಾಮ್ಸನ್‌ನೊಂದಿಗೆ ಸಂಬಂಧವನ್ನು ಹೊಂದಿಲ್ಲ ?
   A) ಪ್ಲಮ್ ಪುಡಿಂಗ್ ಮಾದರಿಯನ್ನು ಮುಂದಿಡಲಾಯಿತು
   B) ಎಲೆಕ್ಟ್ರಾನ್ ಅನ್ನು ಕಂಡುಹಿಡಿಯಲಾಯಿತು
   C) ಡಿಸ್ಚಾರ್ಜ್ ಟ್ಯೂಬ್ ಪ್ರಯೋಗಗಳನ್ನು ನಡೆಸಿದರು
   D) ನ್ಯೂಟ್ರಾನ್ ಅನ್ನು ಕಂಡುಹಿಡಿಯಲಾಯಿತು

77. ರಬ್ಬರ್‌ನ ಮೊನೊಮರ್
   A) ನಿಯೋಪ್ರೆನ್
   B) ಐಸೊಪ್ರೆನ್
   C) ಬ್ಯುನಾ ಎಸ್
   D) ಬ್ಯುನಾ ಎನ್

78. ವಿಕಿರಣಶೀಲತೆ (ರೇಡಿಯೋ ಆ್ಯಕ್ಟಿವಿಟಿ)ಯನ್ನು ಕಂಡುಹಿಡಿದವರು
   A) ಗೋಲ್ಡ್‌ಸ್ಟೈನ್
   B) ವಿಲಿಯಂ ಕ್ರೂಕ್ಸ್
   C) ಹೆನ್ರಿ ಬೆಕ್ವೆರೆಲ್
   D) ಹ್ಯಾನ್ಸ್ ಗೀಗರ್

79. ಯಾವ ಲೋಹದ ಅದಿರಿಗೆ ಲೀಚಿಂಗ್ ಎಂಬ ಸಾಂದ್ರೀಕರಣ ವಿಧಾನವನ್ನು ಬಳಸಲಾಗುತ್ತದೆ ?
   A) ಚಿನ್ನ
   B) ಟಿನ್
   C) ಕಬ್ಬಿಣ
   D) ಅಲ್ಯೂಮಿನಿಯಂ

80. ಸಮಾನ ದ್ರವ್ಯರಾಶಿ ಸಂಖ್ಯೆಗಳು ಮತ್ತು ವಿಭಿನ್ನ ಪರಮಾಣು ಸಂಖ್ಯೆಗಳನ್ನು ಹೊಂದಿರುವ ಪರಮಾಣುಗಳು
   A) ಐಸೋಬಾರ್‌ಗಳು
   B) ಐಸೋಟೋನ್‌ಗಳು
   C) ಐಸೋಟೋಪ್‌ಗಳು
   D) ಉಪಮೆಟಲ್‌ಗಳು

81. ಚೌಕಾಕಾರ ಬಟ್ಟೆಯ ಉದ್ದವು 1 ಮೀಟರ್ ಇದೆ. ಆ ಬಟ್ಟೆಯ ಬೆಲೆ 100 ರೂಪಾಯಿ. ಹಾಗಾದರೆ ಆ ಬಟ್ಟೆಯ ಅರ್ಧದಷ್ಟು ಉದ್ದ ಮತ್ತು ಅಗಲವಿರುವ ಹೊಸ ಚೌಕಾಕಾರದ ಬಟ್ಟೆಯ ಬೆಲೆ ಎಷ್ಟು ?
   A) ರೂ. 25
   B) ರೂ. 50
   C) ರೂ. 75
   D) ರೂ. 100

82. $5 + 3 \times 8 - 12 \div 4 = 3$ ಸಮೀಕರಣವನ್ನು ನಿಜಗೊಳಿಸಲು ಯಾವ ಎರಡು ಚಿಹ್ನೆಗಳನ್ನು ಪರಸ್ಪರ ಬದಲಾಯಿಸಲಾಗುತ್ತದೆ ?
   A) +, –
   B) –, ÷
   C) +, ×
   D) +, ÷

83. ಎರಡು ಸಂಖ್ಯೆಗಳ LCM 60 ಮತ್ತು HCF 3 ಆಗಿದೆ. ಈ ಎರಡು ಸಂಖ್ಯೆಗಳಲ್ಲಿ ಒಂದು 12 ಆಗಿದ್ದರೆ, ಎರಡನೇ ಸಂಖ್ಯೆ ಯಾವುದು ?
   A) 360
   B) 180
   C) 72
   D) 15

84. $\sqrt{15^2 + 12^2 - 2 \times 15 \times 12}$ ಎಷ್ಟು ?
   A) 3
   B) 9
   C) $\sqrt{3}$
   D) 27

85. ಒಂದು ಮಿಶ್ರಣವು 4 ಭಾಗ ನೀರು ಮತ್ತು 5 ಭಾಗ ಹಾಲಿನಿಂದ ಕೂಡಿದೆ. ನೀರಿನ ಪ್ರಮಾಣ 80 ಮಿಲಿ ಲೀಟರ್ ಆಗಿದ್ದರೆ, ಹಾಲಿನ ಪ್ರಮಾಣ ಎಷ್ಟು ?

A) 100 ಮಿ.ಲೀ. B) 180 ಮಿ.ಲೀ. C) 1000 ಮಿ.ಲೀ. D) 1800 ಮಿ.ಲೀ.

86. [(32 × 10) ÷ (10 – 2)] ನಿಂದ 20 ಕಳೆದರೆ

A) 0 B) 10 C) 20 D) 40

87. $\frac{6.4^2 - 3.6^2}{2.8}$ ಯನ್ನು ಕಂಡುಹಿಡಿಯಿರಿ.

A) 1 B) 10 C) 28 D) 100

88. 16.3 ಸೆಂ.ಮೀ ಪಾರ್ಶ್ವವುಳ್ಳ ಸಮಬಾಹು ತ್ರಿಕೋನದ ಪರಿಧಿಗಳು ಮತ್ತು 12.1 ಸೆಂ.ಮೀ ಪಾರ್ಶ್ವವುಳ್ಳ ಚೌಕಾಕಾರದ ನಡುವಿನ ವ್ಯತ್ಯಾಸವೇನು ?

A) 0.05 ಸೆಂ.ಮೀ. B) 0.5 ಸೆಂ.ಮೀ. C) 4.1 ಸೆಂ.ಮೀ. D) 13.6 ಸೆಂ.ಮೀ.

89. ನನ್ನ ಕೈಯಲ್ಲಿ 10 ರೂಪಾಯಿಯ 60 ನೋಟುಗಳಿವೆ. ನೋಟುಗಳಿಗೆ ಅನುಕ್ರಮವಾಗಿ ಸಂಖ್ಯೆಯನ್ನು ನೀಡಲಾಗಿದೆ. ಮೊದಲ ನೋಟಿನ ಸಂಖ್ಯೆ 7575 ಆಗಿದ್ದರೆ ಕೊನೆಯ ನೋಟಿನ ಸಂಖ್ಯೆ ಎಷ್ಟು ?

A) 7637 B) 7636 C) 7635 D) 7634

90. ಬಿಟ್ಟ ಸ್ಥಳ ಭರ್ತಿಮಾಡಿ.

1, 5, 11, 19, 29, ______, 55

A) 42 B) 40 C) 32 D) 41

91. FILE ಎಂಬುವುದನ್ನು ನಿರ್ದಿಷ್ಟ ಭಾಷೆಯಲ್ಲಿ UROV ಎಂದು ಬರೆಯಲಾಗಿದೆ. ಹಾಗಾದರೆ ನೀವು ಅದೇ ಭಾಷೆಯಲ್ಲಿ SOUR ಎಂಬುದನ್ನು ಹೇಗೆ ಬರೆಯುತ್ತೀರಿ ?

A) IFLT B) HLFI C) LIFT D) LHIF

92. ಒಂದು ಕುಟುಂಬವು ಅಜಯ್, ಅವರ ಪತ್ನಿ, ನಾಲ್ವರು ಪುತ್ರರು ಮತ್ತು ಅವರ ಪತ್ನಿಯರನ್ನು ಒಳಗೊಂಡಿದೆ. ಪ್ರತಿಯೊಬ್ಬ ಮಗನಿಗೆ ಮೂವರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಹಾಗಾದರೆ ಆ ಕುಟುಂಬದಲ್ಲಿ ಎಷ್ಟು ಪುರುಷರಿದ್ದಾರೆ ?

A) 9 B) 12 C) 17 D) 15

93. ಕ್ರಿಕೆಟ್ ಪಂದ್ಯದಲ್ಲಿ ಮೊದಲ 10 ಓವರ್‌ಗಳಲ್ಲಿ ರನ್ ರೇಟ್ 3.2. ಇನ್ನುಳಿದ 40 ಓವರ್‌ಗಳಲ್ಲಿ ಎದುರಾಳಿ ತಂಡದ 282 ರನ್‌ಗಳನ್ನು ಮೀರಿಸಲು ಎಷ್ಟು ರನ್ ರೇಟ್‌ನಲ್ಲಿ ರನ್ ಗಳಿಸಬಹುದು ?

A) 6.25 B) 6.5 C) 6.75 D) 7

94. ಜೋಸೆಫ್ ಒಂದು ಸ್ಥಳದಿಂದ ಇನ್ನೊಂದಕ್ಕೆ 30 ಕಿ.ಮೀ./ಗಂ. ವೇಗದಲ್ಲಿಯೂ ಮತ್ತು ಮರಳಿ 120 ಕಿ.ಮೀ./ಗಂ. ವೇಗದಲ್ಲಿ ಪ್ರಯಾಣಿಸಿದರು. ಈ ಎರಡೂ ದೂರವನ್ನು ಒಟ್ಟಿಗೆ ಕ್ರಮಿಸಲು 5 ಗಂಟೆಗಳನ್ನು ತೆಗೆದುಕೊಂಡರೆ ಜೋಸೆಫ್ ಒಂದು ದಿಕ್ಕಿನಲ್ಲಿ ಎಷ್ಟು ದೂರ ಪ್ರಯಾಣಿಸಿದರು ?

A) 150 ಕಿ.ಮೀ. B) 120 ಕಿ.ಮೀ. C) 240 ಕಿ.ಮೀ. D) 180 ಕಿ.ಮೀ.

95. ಸೈಕಲ್ ಅನ್ನು ರೂ. 2850 ಕ್ಕೆ ಮಾರಾಟ ಮಾಡುವುದರಿಂದ ಶೇ. 14 ರಷ್ಟು ಲಾಭವಾಗುತ್ತದೆ. ಶೇಕಡಾವಾರು ಲಾಭ ಕೇವಲ ಶೇ. 8 ರಷ್ಟು ಸಿಗಬೇಕೆಂದಾದರೆ ಸೈಕಲ್ ಅನ್ನು ಎಷ್ಟು ಬೆಲೆಗೆ ಮಾರಾಟ ಮಾಡಬೇಕು ?

A) 2,600 B) 2,700 C) 2,800 D) 3,000

96. 3 ವರ್ಷಗಳ ಅಂತರದಲ್ಲಿ ಜನಿಸಿದ 5 ಮಕ್ಕಳ ವಯಸ್ಸಿನ ಮೊತ್ತವು 50 ಆಗಿದ್ದರೆ, ಅತ್ಯಂತ ಕಿರಿಯ ಮಗುವಿನ ವಯಸ್ಸು ಎಷ್ಟು ?

A) 4 B) 5 C) 8 D) 10

97. $853 \times 1346 \times 452 \times 226$ ರ ಗುಣಾಕಾರ ಫಲಿತಾಂಶದಲ್ಲಿ ಏಕಸ್ಥಾನದಲ್ಲಿರುವ ಸಂಖ್ಯೆ ಯಾವುದು ?

A) 3 B) 8 C) 5 D) 6

98. ನೀಡಲಾಗಿರುವ ಜೋಡಿಗಳಲ್ಲಿ ಒಂದು ಮಾತ್ರ ಇತರ ಮೂರು ಜೋಡಿಗಳಿಗಿಂತ ಭಿನ್ನವಾಗಿದೆ. ಆ ಜೋಡಿ ಯಾವುದು ?

A) 17, 71 B) 23, 32 C) 19, 90 D) 46, 64

99. ಮೋಹನ್‌ರವರ ತಿಂಗಳ ಆದಾಯ ರೂ. 50,000. ಆದಾಯದ ಶೇ. 15 ರಷ್ಟನ್ನು ಮಕ್ಕಳ ಶಿಕ್ಷಣಕ್ಕೆ, ಶೇ. 28 ರಷ್ಟನ್ನು ಮನೆಯ ವೆಚ್ಚಕ್ಕೆ ಹಾಗೂ ಶೇ. 10 ರಷ್ಟನ್ನು ಬಾಡಿಗೆಗೆ ಬಳಸಿದ್ದಾರೆ. ಹಾಗಾದರೆ ತಿಂಗಳ ಕೊನೆಯಲ್ಲಿ ಮೋಹನ್‌ರವರ ಉಳಿತಾಯ ಎಷ್ಟು ?

A) ರೂ. 26,000 B) ರೂ. 25,000 C) ರೂ. 24,000 D) ರೂ. 23,500

100. $5 - \left(\frac{1}{4} + 2\frac{1}{2} + 2\frac{1}{4}\right)$ ಯನ್ನು ಕಂಡುಹಿಡಿಯಿರಿ.

A) $2\frac{1}{4}$ B) 5

C) 0 D) ಇವುಗಳಲ್ಲಿ ಯಾವುದೂ ಅಲ್ಲ

**Space for Rough Work**